All India Radio: Bangalore
National Bulletin In Kannada
17.11.2026 7.35 am
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
17.11.2026 7.35 am

ಮುಖ್ಯಾಂಶಗಳು

1. **ಫಿಲಿಪ್ಪೀನ್ಸ್‌ನ ಮನಿಲಾದಲ್ಲಿಂದು 23ನೇ ಆಸಿಯಾನ್–ಭಾರತ ಹಾಗೂ 21ನೇ ಪೂರ್ವ ಏಷ್ಯಾ ಶೃಂಗಸಭೆ: ಪ್ರಧಾನಿ ನರೇಂದ್ರ ಮೋದಿ ಭಾಗಿ**
2. **ಬೆಂಗಳೂರಿನಲ್ಲಿ ಇಂದಿನಿಂದ ಭಾರತ ಪ್ರಾಂತ್ಯದ ಕಾಮನ್‌ವೆಲ್ತ್ ಮಹಿಳಾ ಸಂಸದರ ಸಮ್ಮೇಳನ ಆಯೋಜನೆ; ಲೋಕಸಭಾಧ್ಯಕ್ಷ ಓಂ ಬಿರ್ಲಾ ಉದ್ಘಾಟನೆ**
3. **ಅಂತಾರಾಷ್ಟ್ರೀಯ ದೂರಸಂಪರ್ಕ ಒಕ್ಕೂಟದ ಮಂಡಳಿಗೆ ಭಾರತ ಮರುಆಯ್ಕೆ**
4. **ಸ್ಯಾಫ್ ಚಾಂಪಿಯನ್‌ಷಿಪ್ ಫುಟ್‌ಬಾಲ್ ಪಂದ್ಯಾವಳಿ: ಫೈನಲ್‌ನಲ್ಲಿಂದು ಭಾರತ – ಪಾಕಿಸ್ತಾನ ಮುಖಾಮುಖಿ**

ಫಿಲಿಪ್ಪೀನ್ಸ್ ರಾಜಧಾನಿ ಮನಿಲಾದಲ್ಲಿ ಇಂದು ನಡೆಯಲಿರುವ 23ನೇ ಆಸಿಯಾನ್–ಭಾರತ ಶೃಂಗಸಭೆ ಮತ್ತು 21ನೇ ಪೂರ್ವ ಏಷ್ಯಾ ಶೃಂಗಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಪಾಲ್ಗೊಳ್ಳುತ್ತಿದ್ದಾರೆ. 2026ರ ಸಾಲಿನ ಆಸಿಯಾನ್ ಅಧ್ಯಕ್ಷ ರಾಷ್ಟ್ರವಾಗಿ ಫಿಲಿಪ್ಪೀನ್ಸ್ ಈ ಶೃಂಗಸಭೆಗಳನ್ನು ಆಯೋಜಿಸಿದೆ.

ಈ ಶೃಂಗಸಭೆಗಳ ವೇಳೆ ಪ್ರಧಾನಮಂತ್ರಿಯವರು ಆಸಿಯಾನ್ ನಾಯಕರೊಂದಿಗೆ ದ್ವಿಪಕ್ಷೀಯ ಹಾಗೂ ಪ್ರಾದೇಶಿಕ ಹಿತಾಸಕ್ತಿಯ ವಿಷಯಗಳ ಕುರಿತು ಚರ್ಚಿಸಲಿದ್ದಾರೆ. ಆಸಿಯಾನ್–ಭಾರತ ಕ್ರಿಯಾ ಯೋಜನೆ 2026–2030ರ ಅನುಷ್ಠಾನದ ಪ್ರಗತಿಯನ್ನು ಪರಿಶೀಲಿಸುವುದು ಮತ್ತು ಭವಿಷ್ಯದ ಸಹಕಾರದ ರೂಪುರೇಷೆಗಳನ್ನು ರೂಪಿಸುವುದು 23ನೇ ಆಸಿಯಾನ್–ಭಾರತ ಶೃಂಗಸಭೆಯ ಮುಖ್ಯ ಉದ್ದೇಶವಾಗಿದೆ.

ಇನ್ನು, 21ನೇ ಪೂರ್ವ ಏಷ್ಯಾ ಶೃಂಗಸಭೆಯು ಪ್ರಾದೇಶಿಕ ಮತ್ತು ಜಾಗತಿಕ ಬೆಳವಣಿಗೆಗಳ ಕುರಿತು ಸಂವಾದ ನಡೆಸಲು ಪ್ರಮುಖ ವೇದಿಕೆಯಾಗಿದ್ದು, ಇಲ್ಲಿ ಇಂಡೋ–ಪೆಸಿಫಿಕ್ ಪ್ರದೇಶದಲ್ಲಿ ಶಾಂತಿ, ಸ್ಥಿರತೆ, ಭದ್ರತೆ ಮತ್ತು ಸಹಕಾರವನ್ನು ಬಲಪಡಿಸುವ ಕುರಿತು ವಿಸ್ತೃತ ಚರ್ಚೆಗಳು ನಡೆಯಲಿವೆ. ಭಾರತ ಮತ್ತು ಆಸಿಯಾನ್ ರಾಷ್ಟ್ರಗಳು 2026ನೇ ಇಸವಿಯನ್ನು 'ಕಡಲ ಸಹಕಾರದ ಆಸಿಯಾನ್–ಭಾರತ

ವರ್ಷ'ವನ್ನಾಗಿ ಆಚರಿಸುತ್ತಿದ್ದು, 2027ಕ್ಕೆ ಉಭಯ ರಾಷ್ಟ್ರಗಳ ನಡುವಿನ ಸಂವಾದ ಸಂಬಂಧಗಳ 35 ವರ್ಷಗಳು ಹಾಗೂ ಸಮಗ್ರ ಕಾರ್ಯತಂತ್ರದ ಪಾಲುದಾರಿಕೆಯ 5 ವರ್ಷಗಳು ಪೂರ್ಣಗೊಳ್ಳಲಿವೆ.

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಫಿಲಿಪ್ಪೀನ್ಸ್ ರಾಜಧಾನಿ ಮನಿಲಾದಲ್ಲಿ ನಿನ್ನೆ ಅಧ್ಯಕ್ಷ ಫರ್ಡಿನಾಂಡ್ ಆರ್. ಮಾರ್ಕೋಸ್ ಜೂನಿಯರ್ ಆಯೋಜಿಸಿದ್ದ ಔತಣಕೂಟದಲ್ಲಿ ಭಾಗವಹಿಸಿದರು. ಫಿಲಿಪ್ಪೀನ್ಸ್‌ನ ಸಾಂಪ್ರದಾಯಿಕ ಉಡುಗೆ 'ಬರೋಂಗ್ ತಗಾಲೋಗ್' ಧರಿಸಿ ಆಗಮಿಸಿದ ಪ್ರಧಾನಮಂತ್ರಿಯವರನ್ನು ಅಧ್ಯಕ್ಷರು ಮತ್ತು ಪ್ರಥಮ ಮಹಿಳೆ ಲೂಯಿಸ್ ಅರನೆಟಾ–ಮಾರ್ಕೋಸ್ ಆತ್ಮೀಯವಾಗಿ ಸ್ವಾಗತಿಸಿದರು.

ಅಮೆರಿಕ, ಭಾರತ, ಆಸ್ಟ್ರೇಲಿಯಾ ಮತ್ತು ಜಪಾನ್ ರಾಷ್ಟ್ರಗಳನ್ನು ಒಳಗೊಂಡ 'ಕ್ವಾಡ್' ಒಕ್ಕೂಟದ ನಾಯಕರ ಸಭೆಯು ಆಸಿಯಾನ್ ಶೃಂಗಸಭೆಯ ಹಿನ್ನೆಲೆಯಲ್ಲಿ ಫಿಲಿಪ್ಪೀನ್ಸ್‌ನ ಮನಿಲಾದಲ್ಲಿ ಇಂದು ನಡೆಯಲಿದೆ.

ಇಂಡೋ–ಪೆಸಿಫಿಕ್ ಪ್ರದೇಶದಲ್ಲಿ ಶಾಂತಿ, ಸಮೃದ್ಧಿ ಮತ್ತು ಭದ್ರತೆಯನ್ನು ಉತ್ತೇಜಿಸುವ ನಿಟ್ಟಿನಲ್ಲಿ ನಾಯಕರು ಪರಸ್ಪರ ಹಿತಾಸಕ್ತಿಯ ವಿಷಯಗಳ ಕುರಿತು ಚರ್ಚಿಸಲಿದ್ದಾರೆ.

ಅಮೆರಿಕದ ಪ್ರಸ್ತುತ ಅಧ್ಯಕ್ಷರಾಗಿ ಡೊನಾಲ್ಡ್ ಟ್ರಂಪ್ ಅಧಿಕಾರ ವಹಿಸಿಕೊಂಡ ಬಳಿಕ ನಡೆಯುತ್ತಿರುವ ಮೊದಲ ಕ್ವಾಡ್ ನಾಯಕರ ಸಭೆ ಇದಾಗಿದೆ. ಇದಕ್ಕೂ ಮುನ್ನ ಕೊನೆಯ ಬಾರಿಗೆ 2024ರ ಸೆಪ್ಟೆಂಬರ್‌ನಲ್ಲಿ ಅಮೆರಿಕದ ಆಗಿನ ಅಧ್ಯಕ್ಷ ಜೋ ಬೈಡೆನ್ ಅವರ ಅಧ್ಯಕ್ಷತೆಯಲ್ಲಿ ಡೆಲಾವೇರ್‌ನಲ್ಲಿ ಕ್ವಾಡ್ ಶೃಂಗಸಭೆ ನಡೆದಿತ್ತು.

ಬೆಂಗಳೂರಿನ ವಿಧಾನಸೌಧದಲ್ಲಿ ಭಾರತ ಪ್ರಾಂತ್ಯದ ಕಾಮನ್‌ವೆಲ್ತ್ ಮಹಿಳಾ ಸಂಸದರ ಸಮ್ಮೇಳನ ಇಂದಿನಿಂದ ಎರಡು ದಿನಗಳ ಕಾಲ ನಡೆಯಲಿದೆ. ಸಮ್ಮೇಳನವನ್ನು ಲೋಕಸಭಾಧ್ಯಕ್ಷ ಓಂ ಬಿರ್ಲಾ ಉದ್ಘಾಟಿಸಲಿದ್ದಾರೆ.

ಉದ್ಘಾಟನಾ ಸಮಾರಂಭದಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭಾಗವಹಿಸಿ ಮುಖ್ಯ ಭಾಷಣ ಮಾಡಲಿದ್ದಾರೆ. ರಾಜ್ಯಸಭೆಯ ಉಪಸಭಾಪತಿ ಹರಿವಂಶ್, ಉಪಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್, ವಿಧಾನಸಭೆಯ ಸಭಾಧ್ಯಕ್ಷರಾದ ಜಿ.ಎಸ್.ಪಾಟೀಲ್ ಮತ್ತು ಸಿಡಬ್ಲ್ಯೂಪಿ ಭಾರತ ಪ್ರಾಂತ್ಯದ ಅಧ್ಯಕ್ಷರಾದ ದಗ್ಗುಬಾಟಿ ಪುರಂದರೇಶ್ವರಿ ಸಭೆಯನ್ನುದ್ದೇಶಿಸಿ ಮಾತನಾಡಲಿದ್ದಾರೆ.

ಸಂಸತ್ತು ಮತ್ತು ರಾಜ್ಯ, ಕೇಂದ್ರಾಡಳಿತ ಪ್ರದೇಶಗಳ ವಿಧಾನಮಂಡಲಗಳ ಮಹಿಳಾ ಶಾಸಕರು ಹಾಗೂ ಸಂಸದರು ಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆ.

ನಾಳೆ ರಾಜ್ಯಪಾಲರಾದ ಡಾ.ಸುಧಾ ಯಾದವ್ ಅವರ ಸಮಾರೋಪ ಭಾಷಣದೊಂದಿಗೆ ಸಮ್ಮೇಳನ ಸಂಪನ್ನಗೊಳ್ಳಲಿದೆ.

ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯವು ನವದೆಹಲಿಯಲ್ಲಿ ಇಂದಿನಿಂದ ಎರಡು ದಿನಗಳ 'ಸಮಾವೇಶಿ ನೀತಿ ಸಂಕಲ್ಪ' ಇಲಾಖಾ ಶೃಂಗಸಭೆಯನ್ನು ಆಯೋಜಿಸಲಿದೆ.
ರಾಷ್ಟ್ರೀಯ ಆದ್ಯತೆಗಳ ಅನುಷ್ಠಾನದಲ್ಲಿ ಸಾಮೂಹಿಕ ಜವಾಬ್ದಾರಿಯನ್ನು ಹೆಚ್ಚಿಸುವುದು ಹಾಗೂ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವಿನ ಸಹಕಾರದ ಮೂಲಕ ಅಭಿವೃದ್ಧಿ ಕಾರ್ಯಗಳಿಗೆ ವೇಗ ನೀಡುವ ಉದ್ದೇಶದಿಂದ ಪ್ರಧಾನಿ ನರೇಂದ್ರ ಮೋದಿ ಅವರು ರೂಪಿಸಿರುವ ಇಲಾಖಾ ಶೃಂಗಸಭೆಗಳ ಸರಣಿಯಲ್ಲಿ ಇದು ಮೂರನೇ ಶೃಂಗಸಭೆಯಾಗಿದೆ.
ಸಾಮಾಜಿಕ ನ್ಯಾಯ ಮತ್ತು ಸಮಗ್ರ ಅಭಿವೃದ್ಧಿಗೆ ಸಂಬಂಧಿಸಿದ ನೀತಿಗಳು, ಕಾರ್ಯಕ್ರಮಗಳು ಹಾಗೂ ಕಾರ್ಯತಂತ್ರಗಳ ಕುರಿತು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಅರ್ಥಪೂರ್ಣ ಚರ್ಚೆ, ಜವಾಬ್ದಾರಿಯ ಹಂಚಿಕೆ ಮತ್ತು ಸಮನ್ವಯದೊಂದಿಗೆ ಕಾರ್ಯನಿರ್ವಹಿಸಲು ಈ ಶೃಂಗಸಭೆ ವೇದಿಕೆ ಕಲ್ಪಿಸಲಿದೆ.
ಶೃಂಗಸಭೆಯ ಸಮಾರೋಪ ಅಧಿವೇಶನದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಭಾಗವಹಿಸಲಿದ್ದಾರೆ.

ಕತಾರ್‌ನ ದೋಹಾದಲ್ಲಿ ನಡೆಯುತ್ತಿರುವ ಐಟಿಯು ಪೂರ್ಣಪ್ರಮಾಣದ ಸಮ್ಮೇಳನದಲ್ಲಿ ಭಾರತ ಅಂತಾರಾಷ್ಟ್ರೀಯ ದೂರಸಂಪರ್ಕ ಒಕ್ಕೂಟದ ಮಂಡಳಿಗೆ ಮುಂದಿನ ಅವಧಿಗೆ ಅಧಿಕೃತವಾಗಿ ಮರು ಆಯ್ಕೆಯಾಗಿದೆ.

ಎಲ್ಲರಿಗೂ ಸಂಪರ್ಕಿತ, ಅಂತರ್ಗತ, ಸುರಕ್ಷಿತ ಮತ್ತು ಸುಸ್ಥಿರ ಡಿಜಿಟಲ್ ಭವಿಷ್ಯವನ್ನು ನಿರ್ಮಿಸುವ ನಿಟ್ಟಿನಲ್ಲಿ ಎಲ್ಲ ಸದಸ್ಯ ರಾಷ್ಟ್ರಗಳೊಂದಿಗೆ ಕೈಜೋಡಿಸಲು ಭಾರತ ಬದ್ಧತೆ ಇದು ಸಹಕಾರಿಯಾಗಿದೆ.

ದೂರಸಂಪರ್ಕ ಕ್ಷೇತ್ರ ಕೇವಲ ಜಾಲಗಳು, ಸ್ಪೆಕ್ಟ್ರಮ್ ಮತ್ತು ಅಂತರ್ಜಾಲ ವೇಗಕ್ಕೆ ಮಾತ್ರ ಸೀಮಿತವಾಗಿರದೆ, ಆಡಳಿತ ಮತ್ತು ಸಾರ್ವಜನಿಕ ಸೇವೆಗಳ ಸುಲಭ ಲಭ್ಯತೆಗೆ ಪ್ರಮುಖ ಸಾಧನವಾಗಿ ಹೊರಹೊಮ್ಮಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಈ ಹಿಂದೆ ಅಭಿಪ್ರಾಯಪಟ್ಟಿದ್ದರು.

ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ನಿನ್ನೆ ಕಾನ್ಪುರ ಸೆಂಟ್ರಲ್‌ನಿಂದ ದೆಹಲಿಯ ಆನಂದ್ ವಿಹಾರ್ ಟರ್ಮಿನಲ್‌ವರೆಗೆ ಸಂಚರಿಸುವ ನೂತನ ದೈನಂದಿನ ಕಾನ್ಪುರ ಎಕ್ಸ್‌ಪ್ರೆಸ್ ರೈಲಿನ ಉದ್ಘಾಟನಾ ಸಂಚಾರಕ್ಕೆ ಹಸಿರು ನಿಶಾನೆ ತೋರಿದರು.

428 ಕಿಲೋಮೀಟರ್ ದೂರ ಕ್ರಮಿಸುವ ಈ ರೈಲು 22 ಆಧುನಿಕ ಬೋಗಿಗಳನ್ನು ಹೊಂದಿದ್ದು, ಉತ್ತರ ಪ್ರದೇಶ ಮತ್ತು ದೆಹಲಿ ನಡುವಿನ ರೈಲು ಸಂಪರ್ಕವನ್ನು ಮತ್ತಷ್ಟು ಬಲಪಡಿಸಲಿದೆ.

ಸಂತ ಶಿರೋಮಣಿ ಗುರು ರವಿದಾಸ್ ಅವರ 650ನೇ ಜನ್ಮಜಯಂತಿ ಅಂಗವಾಗಿ ಬಿಜೆಪಿ ನಾಳೆಯಿಂದ ದೇಶಾದ್ಯಂತ 2 ಸಾವಿರದ 402 ಕಿಲೋಮೀಟರ್ ಉದ್ದದ 'ಸಮರಸತಾ ಸಂಕಲ್ಪ ಯಾತ್ರೆ' ಆರಂಭಿಸಲಿದೆ.

ಪಂಜಾಬ್‌ನ ಜಲಂಧರ್‌ನಿಂದ ಆರಂಭವಾಗುವ 16 ದಿನಗಳ ಈ ಯಾತ್ರೆ ಡಿಸೆಂಬರ್ 3ರಂದು ಉತ್ತರ ಪ್ರದೇಶದ ವಾರಾಣಸಿಯಲ್ಲಿ ಸಮಾಪನಗೊಳ್ಳಲಿದೆ.

ಆಕಾಶವಾಣಿಯು 30 ವರ್ಷದೊಳಗಿನ ಯುವ ಕಲಾವಿದರಿಗಾಗಿ 'ಎಐಆರ್ ರೈಸಿಂಗ್ ಸ್ಟಾರ್ಸ್' ಎಂಬ ರಾಷ್ಟ್ರವ್ಯಾಪಿ ವಿಶೇಷ ಸಂಗೀತ ಕಚೇರಿಗಳ ಮೊದಲ ಸರಣಿಯನ್ನು ಪ್ರಾರಂಭಿಸುತ್ತಿದೆ. ಇಂದಿನಿಂದ ಇದೇ 30ರವರೆಗೆ ದೇಶದ 26 ವಿವಿಧ ಸ್ಥಳಗಳಲ್ಲಿ ಈ ಸಂಗೀತ ಕಚೇರಿಗಳು ಆಯೋಜನೆಗೊಳ್ಳಲಿವೆ.

ಉದಯೋನ್ಮುಖ ಮತ್ತು ಯುವ ಸಂಗೀತ ಕಲಾವಿದರಿಗೆ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಲು ಮತ್ತು ಶ್ರೋತೃಗಳನ್ನು ತಲುಪಲು ಈ ಕಚೇರಿಗಳು ವಿಶಿಷ್ಟ ರಾಷ್ಟ್ರೀಯ ವೇದಿಕೆಯನ್ನು ಕಲ್ಪಿಸಿಕೊಡಲಿವೆ. ಆಕಾಶವಾಣಿಯ 90ನೇ ವಾರ್ಷಿಕೋತ್ಸವದ ಆಚರಣೆಯ ಭಾಗವಾಗಿ ಈ ಉಪಕ್ರಮವನ್ನು ಕೈಗೊಳ್ಳಲಾಗಿದ್ದು, ಮುಂದಿನ ಪೀಳಿಗೆಯ ಪ್ರದರ್ಶಕರನ್ನು ಗುರುತಿಸಿ ಪೋಷಿಸುವ ಬದ್ಧತೆಯನ್ನು ಇದು ಬಿಂಬಿಸುತ್ತದೆ.

ಶಿಮ್ಲಾ, ಡೆಹ್ರಾಡೂನ್, ದೆಹಲಿ, ಲಖನೌ, ವಾರಣಾಸಿ, ಜೈಪುರ್, ಹೈದರಾಬಾದ್, ಬೆಂಗಳೂರು, ಕೋಲ್ಕತ್ತಾ, ಇಂಫಾಲ್, ಮುಂಬೈ, ಅಹಮದಾಮದ್, ನಾಗ್ಪುರ್, ಪುದುಚೇರಿ, ಜಮ್ಮು ಮತ್ತು ಗುವಾಹಟಿ ಸೇರಿದಂತೆ ಒಟ್ಟು 26 ಆಕಾಶವಾಣಿ ಕೇಂದ್ರಗಳ ಮೂಲಕ ಈ ಕಚೇರಿಗಳು ನಡೆಯಲಿವೆ.

ಹಾರ್ಮುಜ್ ಜಲಸಂಧಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕಳೆದ 24 ಗಂಟೆಗಳಲ್ಲಿ ಕನಿಷ್ಠ ನಾಲ್ಕು ತೈಲ ಟ್ಯಾಂಕರ್‌ಗಳು ಹಾನಿಗೊಳಗಾಗಿವೆ. ಪೂರ್ವ ಹಾರ್ಮುಜ್ ಜಲಸಂಧಿಯಲ್ಲಿ ನೌಕಾಬಾಂಬ್‌ಗೆ

ಡಿಕ್ಕಿಹೊಡೆದು ನಾಲ್ಕನೇ ತೈಲ ಟ್ಯಾಂಕರ್‌ಗೆ ಬೆಂಕಿ ಹತ್ತಿಕೊಂಡಿದೆ ಎಂದು ಇರಾನ್ ನೌಕಾಪಡೆಯು ತಿಳಿಸಿದೆ.

ಹಡಗು ತನ್ನ ನೇವಿಗೇಷನ್ ವ್ಯವಸ್ಥೆಗಳನ್ನು ನಿಷ್ಕ್ರಿಯ ಮಾಡಿಕೊಂಡು ಕಡಲ ನಿರ್ಬಂಧಿತ ವಲಯದಲ್ಲಿ ಸಂಚರಿಸುತ್ತಿತ್ತು ಎಂದು ಇರಾನ್ ನೌಕಾಪಡೆ ಆರೋಪಿಸಿದೆ.

ಬಾಂಗ್ಲಾದೇಶದ ಢಾಕಾದಲ್ಲಿ **ಇಂದು** ಸ್ಯಾಫ್ ಚಾಂಪಿಯನ್‌ಷಿಪ್ ಫುಟ್‌ಬಾಲ್ ಪಂದ್ಯಾವಳಿಯ ಫೈನಲ್ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಭಾರತ, ಪಾಕಿಸ್ತಾನ ತಂಡವನ್ನು ಎದುರಿಸಲಿದೆ.

ಭಾರತ ತಂಡ 10ನೇ ಬಾರಿಗೆ ಪ್ರಶಸ್ತಿ ಗೆಲ್ಲುವ ಹಾಗೂ ಸತತ ಮೂರನೇ ಬಾರಿ ಚಾಂಪಿಯನ್ ಪಟ್ಟ ಅಲಂಕರಿಸುವ ಗುರಿ ಹೊಂದಿದೆ. ತಂಡದ ಆಟಗಾರರು ಮತ್ತು ಸಹಾಯಕ ಸಿಬ್ಬಂದಿಯ ಸಂಘಟಿತ ಪ್ರಯತ್ನದಿಂದ ಮತ್ತೊಮ್ಮೆ ಫೈನಲ್ ತಲುಪಿರುವುದಕ್ಕೆ ತೃಪ್ತಿ ವ್ಯಕ್ತಪಡಿಸಿರುವುದಾಗಿ ಭಾರತ ತಂಡದ ಮುಖ್ಯ ಕೋಚ್ ನೌಶಾದ್ ಮೂಸಾ ತಿಳಿಸಿದ್ದಾರೆ.
ಪಾಕಿಸ್ತಾನ ತಂಡ ಇದೇ ಮೊದಲ ಬಾರಿಗೆ ಸಾಫ್ ಚಾಂಪಿಯನ್‌ಷಿಪ್ ಫೈನಲ್ ಪ್ರವೇಶಿಸಿದೆ.

ಭಾರತೀಯ ಬಿಲಿಯರ್ಡ್ಸ್ ಮತ್ತು ಸ್ನೂಕರ್ ಒಕ್ಕೂಟ – ಬಿಎಸ್‌ಎಫ್‌ಐ ಸಂಸ್ಥೆಯ ಶತಮಾನೋತ್ಸವದ ಅಂಗವಾಗಿ ಇಂದೋರ್‌ನಲ್ಲಿ ವಿಶ್ವ ಸ್ನೂಕರ್ ಚಾಂಪಿಯನ್‌ಶಿಪ್ 2026ಕ್ಕೆ ಮಧ್ಯಪ್ರದೇಶದ ಮುಖ್ಯಮಂತ್ರಿ ಮೋಹನ್ ಯಾದವ್ ಚಾಲನೆ ನೀಡಿದರು. ಅಂತಾರಾಷ್ಟ್ರೀಯ ಕ್ರೀಡಾಕೂಟಗಳ ಆಯೋಜನೆಗೆ ರಾಜ್ಯ ಹೆಚ್ಚಿನ ಆದ್ಯತೆ ನೀಡುತ್ತಿರುವುದನ್ನು ಅವರು ಈ ಸಂದರ್ಭದಲ್ಲಿ ಪ್ರಸ್ತಾಪಿಸಿದರು.

ರಾಜ್ಯದಲ್ಲಿ ಕ್ರೀಡಾ ಚಟುವಟಿಕೆಗಳು ಹೆಚ್ಚುತ್ತಿರುವುದನ್ನು ಉಲ್ಲೇಖಿಸಿದ ಅವರು, ಕೇವಲ ಮೂರು ದಿನಗಳ ಅವಧಿಯಲ್ಲಿ ಎರಡು ಅಂತಾರಾಷ್ಟ್ರೀಯ ಕ್ರೀಡಾಕೂಟಗಳನ್ನು ಆಯೋಜಿಸಲಾಗುತ್ತಿದೆ ಎಂದು ತಿಳಿಸಿದರು. ಕ್ರೀಡಾಪಟುಗಳಿಗೆ ಅಗತ್ಯವಾದ ಕ್ರೀಡಾ ಸೌಲಭ್ಯಗಳನ್ನು ಒದಗಿಸುವುದರ ಜೊತೆಗೆ, ಕ್ರೀಡಾ ಅಕಾಡೆಮಿಗಳ ಸ್ಥಾಪನೆಗೆ ಅಗತ್ಯವಿದ್ದಾಗ ಭೂಮಿಯನ್ನೂ ಒದಗಿಸುವುದಾಗಿ ಭರವಸೆ ನೀಡಿದರು.

ಮುಕ್ತಾಯ